ವಿಶೇಷ ಸ್ಥಾನಮಾನ ರದ್ದು: 'ಸುಪ್ರೀಂ' ತೀರ್ಪು 11ರಂದು

ಪ್ರಜಾವಾಣಿ ವಾರ್ತೆ

ನವದೆಹಲಿ: ಸಂವಿಧಾನದ 370ನೇ ವಿಧಿಯಡಿ ಜಮ್ಮು ಮತ್ತು ಕಾಶ್ಮೀರಕ್ಕೆ ನೀಡಿದ್ದ ವಿಶೇಷ ಸ್ಥಾನಮಾನ ರದ್ದುಪಡಿಸಿರುವ ಕೇಂದ್ರ ಸರ್ಕಾರದ ನಿರ್ಧಾರವನ್ನು ಪ್ರಶ್ನಿಸಿ ಸಲ್ಲಿಸಿರುವ ಅರ್ಜಿಗಳ ವಿಚಾರಣೆ ಪೂರ್ಣಗೊಳಿಸಿ, ಕಾಯ್ದಿರಿಸಿರುವ ತೀರ್ಪನ್ನು ಸುಪ್ರೀಂ ಕೋರ್ಟ್ ಡಿ.11ರಂದು ಪ್ರಕಟಿಸಲಿದೆ.

ಮುಖ್ಯ ನ್ಯಾಯಮೂರ್ತಿ ಡಿ.ವೈ. ಚಂದ್ರಚೂಡ್ ನೇತೃತ್ವದ, ಐವರು ನ್ಯಾಯಮೂರ್ತಿಗಳಾದ ಸಂಜಯ್ ಕಿಶನ್ ಕೌಲ್, ಸಂಜೀವ್ ಖನ್ನಾ, ಬಿ.ಆರ್. ಗವಾಯಿ ಮತ್ತು ಸೂರ್ಯ ಕಾಂತ್ ಅವರನ್ನೊಳಗೊಂಡ ಸಂವಿಧಾನ ಪೀಠವು 2023ರ ಸೆ. 5ರಂದು ತೀರ್ಪು ಕಾಯ್ದಿರಿಸಿತ್ತು. ಪೀಠವು 16 ದಿನ ವಾದ ಆಲಿಸಿತ್ತು. ಹಿರಿಯ ವಕೀಲರಾದ ಕಪಿಲ್ ಸಿಬಲ್, ರಾಜೀವ್ ಧವನ್, ಗೋಪಾಲ್ ಸುಬ್ರಮಣಿಯಂ, ದುಷ್ಯಂತ್ ದವೆ, ಜಾಫರ್ ಷಾ, ಗೋಪಾಲ್ ಶಂಕರನಾರಾಯಣನ್ ಅರ್ಜಿದಾರರನ್ನು ಪ್ರತಿನಿಧಿಸಿದ್ದಾರೆ.

ಪ್ರಜಾವಾಣಿ DH

Freedom Healthy Cooking Oils presents ಭೂಮಿಕಾ ಕ್ಲಬ್ powered by manipalhospitals LIFE'S ON

ಭೂಮಿಕಾ ಕ್ಲಬ್ ಈಗ ವಿಜಯನಗರದಲ್ಲಿ!

ಭೂಮಿಕಾ ಕ್ಲಬ್ ಚಳಿಗಾಲದ ಆವೃತ್ತಿಯು ರೋಮಾಂಚಕಾರಿ ಚಟುವಟಿಕೆಗಳ ಒಂದು ಶ್ರೇಣಿಯನ್ನೇ ನಿಮಗೆ ತರುತ್ತಿದೆ. ಉಚಿತ ಪ್ರವೇಶವನ್ನು ಪಡೆಯಲು ಈಗಲೇ ನೋಂದಾಯಿಸಿ!

ಉದ್ಘಾಟನೆ: ಗಾನವಿ ಲಕ್ಷ್ಮಣ್

ಶನಿವಾರ,
ಡಿಸೆಂಬರ್ 9, 2023
ಮಧ್ಯಾಹ್ನ 1:30 ರಿಂದ

ವೈಟ್ ಪೆಟಲ್ಸ್, 25, 22ನೇ ಮುಖ್ಯ ರಸ್ತೆ,
ಗೋವಿಂದರಾಜ ನಗರ ವಾರ್ಡ್, ಬಸವೇಶ್ವರ
ಎಚ್‌ಬಿಸಿಎಸ್ ಲೇಔಟ್, ವಿಜಯನಗರ, ಬೆಂಗಳೂರು 40

ಕಾರ್ಯಕ್ರಮದ ಮುಖ್ಯಾಂಶಗಳು

ವಿಂಟರ್ ಸ್ಕಿನ್ ಮತ್ತು ಹೇರ್ ಕೇರ್
ಡಾ. ರಿತಿಕಾ ಹುಬ್ಬಳ್ಳಿ(?) ಕನ್ಸಲ್ಟೆಂಟ್ – ಚರ್ಮರೋಗ & ಕಾಸ್ಮೆಟಾಲಜಿ, ಮಣಿಪಾಲ್ ಆಸ್ಪತ್ರೆ, ಮಲ್ಲೇಶ್ವರಂ.

ಚಳಿಗಾಲದ ಅಲರ್ಜಿಗಳು
ಡಾ. ವಸುನೇತ್ರ ಕಾಸರಗೋಡು
ಕನ್ಸಲ್ಟೆಂಟ್ – ಪ್ಲಾಸ್ಮೋನರಿ ವಿಜ್ಞಾನ, ಮಣಿಪಾಲ್ ಆಸ್ಪತ್ರೆ, ಮಿಲ್ಲರ್ಸ್ ರಸ್ತೆ.

ಅಡುಗೆ ಕಾರ್ಯಕ್ರಮ
ಪೂಜಾ ಪಾಟೀಲ್

ಸಂಗೀತ ಪ್ರದರ್ಶನ
ದಿವ್ಯಾ ರಾಮಚಂದ್ರ

ಗೇಮ್ಸ್ । ಹೈ–ಟೀ । ನೆಟ್‌ವರ್ಕಿಂಗ್

ನೋಂದಾಯಿತರಿಗೆ ಮಾತ್ರ ಪ್ರವೇಶ

In association with A TATA and TESCO Enterprise star

ನೋಂದಾಯಿಸಲು ಇಲ್ಲಿ ಸ್ಕ್ಯಾನ್ ಮಾಡಿ

ವಿದ್ಯುತ್: ಇನ್ನೂ ಇವೆ ಅಪಾಯಕಾರಿ ಸ್ಥಳಗಳು

ಪ್ರಜಾವಾಣಿ ವಾರ್ತೆ

ವಲಯವಾರು ಸಂಖ್ಯೆ

ಉತ್ತರ	ಪೂರ್ವ	ಪಶ್ಚಿಮ	ದಕ್ಷಿಣ
452	1490	4572	10277

ಬೆಂಗಳೂರು: ಕಾಡುಗೋಡಿಯಲ್ಲಿ ವಿದ್ಯುತ್ ತಂತಿ ತುಳಿದು ತಾಯಿ-ಮಗು ಮೃತಪಟ್ಟ ಘಟನೆಯ ನಂತರ ಎಚ್ಚೆತ್ತುಕೊಂಡಿರುವ ಬೆಸ್ಕಾಂ, ನಗರದಲ್ಲಿ ವಿದ್ಯುತ್ ಅವಘಡಗಳಿಗೆ ಕಾರಣವಾಗುವ 'ಅಪಾಯಕಾರಿ' ಸ್ಥಳಗಳನ್ನು ಗುರುತಿಸಿ ದುರಸ್ತಿ ಕಾರ್ಯ ಕೈಗೊಳ್ಳುತ್ತಿದೆ.

ನ. 21 ರಿಂದ 31ರವರೆಗೆ ನಗರದ ನಾಲ್ಕು ಭಾಗಗಳಲ್ಲೂ ಸಮೀಕ್ಷೆ ನಡೆಸಿರುವ ಬೆಸ್ಕಾಂ, 23,187 ಅಪಾಯಕಾರಿ ಸ್ಥಳಗಳನ್ನು ಪತ್ತೆ ಮಾಡಿದೆ. ಅದರಲ್ಲಿ 6,396 ಸ್ಥಳಗಳಲ್ಲಿದ್ದ ಸಮಸ್ಯೆಗಳನ್ನು ತುರ್ತಾಗಿ ಪರಿಹರಿಸಿದೆ. ಇನ್ನೂ 16,791 ಸ್ಥಳಗಳಲ್ಲಿ ದುರಸ್ತಿ ಕಾರ್ಯ ಕೈಗೊಳ್ಳುವುದು ಬಾಕಿ ಇದೆ. ಸಮೀಕ್ಷೆಯಲ್ಲಿ ನಗರದ ಪಶ್ಚಿಮ ಭಾಗದ ಪ್ರದೇಶದ 11,989 ಕಡೆಗಳಲ್ಲಿ ಹೆಚ್ಚು ಅಪಾಯದ ಸ್ಥಳಗಳು ಪತ್ತೆಯಾಗಿವೆ.

ನವೆಂಬರ್ 19ರಂದು ಹೋಪ್ ಫಾರ್ಮ್ ಬಳಿ ನಡೆದ ತಾಯಿ-ಮಗುವಿನ ಸಾವಿನ ಪ್ರಕರಣದ ವಿರುದ್ಧ ಸಾರ್ವಜನಿಕರು ಆಕ್ರೋಶ ವ್ಯಕ್ತಪಡಿಸಿದ ನಂತರ, ಬೆಸ್ಕಾಂ ನಗರದಾದ್ಯಂತ ಅಪಾಯ ತಂದೊಡ್ಡುವಂತಹ ಟ್ರಾನ್ಸ್‌ಫಾರ್ಮರ್, ಹೈಟೆನ್ಷನ್ ತಂತಿಗಳು, ಶಿಥಿಲಗೊಂಡ ವಿದ್ಯುತ್ ಕಂಬಗಳ ಕುರಿತು ಸಮೀಕ್ಷೆ ನಡೆಸಿದೆ.

ಸಮೀಕ್ಷೆಯಲ್ಲಿ ಅಪಾಯಕಾರಿ ವಿದ್ಯುತ್ ಕಂಬಗಳು, ಜೋತುಬಿದ್ದ ತಂತಿಗಳು, ತೆರೆದಿರುವ ಜಂಕ್ಷನ್ ಬಾಕ್ಸ್‌ಗಳು, ಬಾಗಿರುವ ವಿದ್ಯುತ್ ಕಂಬಗಳು ಸೇರಿದಂತೆ ಅಪಾಯ ತಂದೊಡ್ಡುವಂತಹ ಸ್ಥಳಗಳು ಪತ್ತೆಯಾಗಿವೆ.

ನಾಗರಿಕರು ತಮ್ಮ ವ್ಯಾಪ್ತಿಯಲ್ಲಿ ಕಂಡು ಬರುವ ಅಪಾಯಕಾರಿ ವಿದ್ಯುತ್ ಕಂಬಗಳ ಕುರಿತು ವಿವಿಧ ಮಾಧ್ಯಮಗಳ ಮೂಲಕ ಮಾಹಿತಿ ನೀಡುತ್ತಿದ್ದು, ಬೆಸ್ಕಾಂ ಸಿಬ್ಬಂದಿ ಅವುಗಳತ್ತಲೂ ಗಮನಹರಿಸುತ್ತಿದ್ದಾರೆ.

ಸುದ್ದಿ 2 ನಿಮಿಷ

ಎಥೆನಾಲ್: ಕಬ್ಬಿನ ಹಾಲು ನಿಷೇಧ

ನವದೆಹಲಿ (ಪಿಟಿಐ): ಎಥೆನಾಲ್ ಉತ್ಪಾದನೆಗೆ ಕಬ್ಬಿನ ಹಾಲು ಮತ್ತು ಸಕ್ಕರೆ ಪಾಕ ಬಳಸುವುದನ್ನು ಕೇಂದ್ರ ಸರ್ಕಾರ ನಿಷೇಧಿಸಿದೆ. 2023-24ನೇ ಪೂರೈಕೆ ವರ್ಷಕ್ಕೆ (ಡಿಸೆಂಬರ್-ನವೆಂಬರ್) ಇದು ಅನ್ವಯಿಸಲಿದೆ ಎಂದು ಹೇಳಿದೆ.

2023-24ನೇ ಮಾರುಕಟ್ಟೆ ವರ್ಷದಲ್ಲಿ (ಅಕ್ಟೋಬರ್-ಸೆಪ್ಟೆಂಬರ್) ಸಕ್ಕರೆ ಉತ್ಪಾದನೆಯು ಶೇ 9ರಷ್ಟು ಕಡಿಮೆ ಆಗಲಿದೆ ಎಂದು ಭಾರತೀಯ ಸಕ್ಕರೆ ಕಾರ್ಖಾನೆಗಳ ಸಂಘ (ಐಎಸ್‌ಎಂಎ) ಅಂದಾಜು ಮಾಡಿದೆ. ಇದನ್ನು ಗಮನದಲ್ಲಿ ಇಟ್ಟುಕೊಂಡು ಸರ್ಕಾರ ಈ ಕ್ರಮ ಕೈಗೊಂಡಿದೆ.

ದೇಶಿ ಬಳಕೆಗೆ ಸಕ್ಕರೆಯ ಲಭ್ಯತೆ ಸಾಕಷ್ಟು ಇರುವಂತೆ ಮಾಡುವುದು ಮತ್ತು ಬೆಲೆಯನ್ನು ನಿಯಂತ್ರಿಸುವುದು ಈ ನಿರ್ಧಾರದ ಹಿಂದಿನ ಪ್ರಮುಖ ಉದ್ದೇಶವಾಗಿದೆ. ಆಹಾರ ಸಚಿವಾಲಯವು ಸಕ್ಕರೆ ಕಾರ್ಖಾನೆಗಳು ಮತ್ತು ಡಿಸ್ಟಿಲರಿಗಳಿಗೆ ಈ ಸೂಚನೆಯನ್ನು ನೀಡಿದೆ.

ಎಥೆನಾಲ್ ತಯಾರಿಕೆಗೆ ಮೊಲಾಸಿಸ್-ಬಿ (ಕಾಕಂಬಿ) ಬಳಕೆ ಮಾಡಲು ಸರ್ಕಾರ ಅನುಮತಿ ನೀಡಿದೆ. ಈ ನಿರ್ಧಾರವನ್ನು ಒಕ್ಕೂಟವು ಸ್ವಾಗತಿಸಿದೆ.

2023-24ನೇ ಮಾರುಕಟ್ಟೆ ವರ್ಷದಲ್ಲಿ 337 ಲಕ್ಷ ಟನ್ ಸಕ್ಕರೆ ಉತ್ಪಾದನೆ ಆಗುವ ಅಂದಾಜು ಮಾಡಲಾಗಿದೆ. 2022-23ನೇ ಮಾರುಕಟ್ಟೆ ವರ್ಷದಲ್ಲಿ ಆಗಿದ್ದ ಉತ್ಪಾದನೆಗೆ ಹೋಲಿಸಿದರೆ ಶೇ 9ರಷ್ಟು ಇಳಿಕೆ ಕಾಣಲಿದೆ ಎಂದು ಒಕ್ಕೂಟ ಹೇಳಿದೆ.

ಬಿ.ಇಡಿಗೆ ಅರ್ಜಿ: ಡಿ.11ರವರೆಗೆ ವಿಸ್ತರಣೆ

ಬೆಂಗಳೂರು: 2023-24ನೇ ಸಾಲಿನ ಬಿ.ಇಡಿ ಪದವಿಯ ಪ್ರವೇಶಕ್ಕೆ ಸರ್ಕಾರಿ ಸೀಟುಗಳಿಗೆ ಅರ್ಜಿ ಸಲ್ಲಿಸುವ ಅವಧಿಯನ್ನು ಡಿ.11ರವರೆಗೆ ವಿಸ್ತರಿಸಲಾಗಿದೆ.

ಸರ್ಕಾರಿ, ಅನುದಾನಿತ ಹಾಗೂ ಖಾಸಗಿ ಕಾಲೇಜುಗಳಲ್ಲಿ ಲಭ್ಯವಿರುವ ಸರ್ಕಾರಿ ಕೋಟಾದ ಸೀಟುಗಳಿಗೆ ಕಲಾ, ವಿಜ್ಞಾನ ಹಾಗೂ ವಾಣಿಜ್ಯ ಪದವೀಧರರು ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸಬಹುದು ಎಂದು ಕೇಂದ್ರೀಕೃತ ದಾಖಲಾತಿ ಘಟಕದ ಪ್ರಕಟಣೆ ತಿಳಿಸಿದೆ.

ಸಂಕ್ಷಿಪ್ತ ಸುದ್ದಿ

'ಕಾಂತರಾಜ ವರದಿ ಎಲ್ಲ ಪಕ್ಷಗಳು ಬೆಂಬಲಿಸಲಿ'

ಬೆಂಗಳೂರು: ಜಾತಿಗಣತಿಗೆ ಸಂಬಂಧಿಸಿದ ಕಾಂತರಾಜ ವರದಿಗೆ ಎಲ್ಲ ಪಕ್ಷಗಳು ಬೆಂಬಲಿಸಬೇಕು ಎಂದು ಕರ್ನಾಟಕ ರಾಜ್ಯ ಹಿಂದುಳಿದ ವರ್ಗಗಳ ಮತ್ತು ದಲಿತ ಅಲ್ಪಸಂಖ್ಯಾತರ ಸಂಘ ಆಗ್ರಹಿಸಿದೆ.

ಗುರುವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಸಂಘದ ಅಧ್ಯಕ್ಷ ಉದಯಶಂಕರ್, 'ರಾಜ್ಯದಲ್ಲಿರುವ ಎಲ್ಲ ಸಮುದಾಯಗಳ ಜನಸಂಖ್ಯೆಗೆ ಅನುಗುಣವಾಗಿ ಸರ್ಕಾರ ಸೌಲಭ್ಯಗಳನ್ನು ಹಂಚಿಕೆ ಮಾಡಬೇಕು. ಅಂದಾಗ ಮಾತ್ರ ಪ್ರಜಾಪ್ರಭುತ್ವ ಹಾಗೂ ಸಾಮಾಜಿಕ ನ್ಯಾಯಕ್ಕೆ ಒಂದು ಅರ್ಥ ಬರುತ್ತದೆ. ಆದರೆ, ಇದಕ್ಕೆ ಕೆಲ ಸಮುದಾಯಗಳು ಆಕ್ಷೇಪ ವ್ಯಕ್ತಪಡಿಸುತ್ತಿರುವುದು ಸರಿಯಲ್ಲ' ಎಂದು ಹೇಳಿದರು.

'ಕಾಂತರಾಜ ಅವರ ನೇತೃತ್ವದಲ್ಲಿ ನಡೆದ ಜಾತಿ ಗಣತಿ ವರದಿಯನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಕೂಡಲೇ ಸ್ವೀಕರಿಸಿ ಅದನ್ನು ಬಹಿರಂಗಗೊಳಿಸಬೇಕು. ಇದರಿಂದ, ರಾಜ್ಯದಲ್ಲಿರುವ ಹಿಂದುಳಿದ ವರ್ಗಗಳ ಸಾಮಾಜಿಕ, ಆರ್ಥಿಕ ಸ್ಥಿತಿಯ ವಾಸ್ತವ ಅರಿಯಲು ವರದಿ ಸಹಾಯಕವಾಗಲಿದೆ. ನಂತರ ಅದನ್ನು ಸಾರ್ವಜನಿಕರ ಚರ್ಚೆಗೊಳಪಡಿಸಿ, ಅದರ ಸಾಧಕ-ಬಾಧಕಗಳನ್ನು ಪರಾಮರ್ಶಿಸಿ ನಂತರ ಅದನ್ನು ಜಾರಿಗೊಳಿಸಬೇಕು ಎಂದು ಒತ್ತಾಯಿಸಿದರು.

ಸಂಘದ ಸಂಚಾಲಕ ಸಿ.ಕೆ. ರವಿಚಂದ್ರ ಪಾಲ್ಗೊಂಡಿದ್ದರು.

ಆಕ್ಷೇಪಾರ್ಹ ಹೇಳಿಕೆ ಬಿಧೂಡಿ ವಿಷಾದ

ನವದೆಹಲಿ (ಪಿಟಿಐ): ಬಿಎಸ್‌ಪಿ ಸಂಸದ ದ್ಯಾನಿಶ್ ಅಲಿ ವಿರುದ್ಧ ಆಕ್ಷೇಪಾರ್ಹ ಹೇಳಿಕೆ ನೀಡಿದ ಪ್ರಕರಣಕ್ಕೆ ಸಂಬಂಧಿಸಿದಂತೆ ಬಿಜೆಪಿ ಸಂಸದ ರಮೇಶ್ ಬಿಧೂಡಿ ಅವರು ಗುರುವಾರ ಲೋಕಸಭೆಯ ಹಕ್ಕುಬಾಧ್ಯತಾ ಸಮಿತಿ ಮುಂದೆ ವಿಷಾದ ವ್ಯಕ್ತಪಡಿಸಿದ್ದಾರೆ.

ಹಕ್ಕುಬಾಧ್ಯತಾ ಸಮಿತಿಯು ಗುರುವಾರ ಬಿಧೂಡಿ ಮತ್ತು ಅಲಿ ಅವರ ವಾದವನ್ನು ಪ್ರತ್ಯೇಕವಾಗಿ ಆಲಿಸಿತು ಎಂದು ಮೂಲಗಳು ಹೇಳಿವೆ.

ಬಿಧೂಡಿ ವಿಷಾದ ವ್ಯಕ್ತಪಡಿಸಿರುವ ಕಾರಣ ಸಮಿತಿಯು ಈ ವಿವಾದಕ್ಕೆ ತೆರೆಎಳೆದು, ಸ್ಪೀಕರ್‌ಗೆ ವರದಿ ಒಪ್ಪಿಸುವ ಸಾಧ್ಯತೆಯಿದೆ ಎಂದು ತಿಳಿಸಿವೆ.

ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ
ಟಿ. ಚೌಡಯ್ಯ ರಸ್ತೆ, ಕುಮಾರ ಪಾರ್ಕ್ ಪಶ್ಚಿಮ, ಬೆಂಗಳೂರು - 560 020.

ನಂ: ಬೆಂಅಪ್ರಾ/ನಯೋಸ/CLU-427/2022–23/1904/2023–24 ದಿನಾಂಕ: 07.12.2023

ಪ್ರಕಟಣೆ

ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ರ ಕಲಂ 14–A ರ ಅಡಿಯಲ್ಲಿ ಈ ಕೆಳಕಂಡ ಅರ್ಜಿದಾರರು ವ್ಯವಸಾಯ ವಲಯದಿಂದ ವಸತಿ ಉಪಯೋಗಕ್ಕಾಗಿ ಭೂಉಪಯೋಗ ಬದಲಾವಣೆ ಕೋರಿ ಅರ್ಜಿ ಸಲ್ಲಿಸಿರುತ್ತಾರೆ. ಭೂಉಪಯೋಗ ಬದಲಾವಣೆಯ ಪ್ರಸ್ತಾವನೆಯ ವಿವರಗಳು ಈ ಕೆಳಕಂಡಂತೆ ಇರುತ್ತದೆ. ಸದರಿ ಭೂಉಪಯೋಗ ಬದಲಾವಣೆ ಪ್ರಸ್ತಾವನೆ ಬಗ್ಗೆ ಯಾವುದೇ ಆಕ್ಷೇಪಣೆಗಳಿದ್ದರೆ, ಈ ಪ್ರಕಟಣೆ ಪ್ರಕಟವಾದ ದಿನಾಂಕದಿಂದ 15 ದಿವಸಗಳೊಳಗಾಗಿ ಆಕ್ಷೇಪಣೆಗಳನ್ನು ಲಿಖಿತವಾಗಿ ನಗರ ಯೋಜಕ ಸದಸ್ಯರು, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ, ಬೆಂಗಳೂರು ಕಛೇರಿಗೆ ಸಲ್ಲಿಸಲು ತಿಳಿಸಲಾಗಿದೆ. ನಿಗದಿತ ಅವಧಿಯ ನಂತರ ಬರುವ ಯಾವುದೇ ಆಕ್ಷೇಪಣೆಗಳನ್ನು ಪರಿಗಣಿಸುವುದಿಲ್ಲ.

ಕ್ರ. ಸಂ.	ಅರ್ಜಿದಾರರ ಹೆಸರು	ತಾಲ್ಲೂಕು	ಹೋಬಳಿ	ಗ್ರಾಮದ ಹೆಸರು	ಸರ್ವೆ ನಂ.	ವಿಸ್ತೀರ್ಣ ಎ–ಗು	ಪರಿಷ್ಕೃತ ಮಹಾಯೋಜನೆ 2015ರ ಪ್ರಕಾರ ಭೂಉಪಯೋಗ	ಬದಲಾವಣೆ ಕೋರಿರುವ ಭೂ ಉಪಯೋಗ
1	M/s. Sri Sai Nandana Builders ರವರ ಪರವಾಗಿ ಶ್ರೀ ಎಂ.ಎನ್. ಬಾಬು, ಶ್ರೀ ಎಂ. ಸುಧಾಕರ್, ಶ್ರೀ ಎಂ. ಪ್ರಕಾಶ್, ಶ್ರೀ ಕೆ.ವಿ. ಹರಿಬಾಬು, ಶ್ರೀ ಡಿ. ಪ್ರಭಾಕರ್ ನಾಯ್ಡು ಮತ್ತು ಶ್ರೀ ಬಿ. ಲಕ್ಷ್ಮಯ್ಯ	ಆನೇಕಲ್	ಸರ್ಜಾಪುರ	ಕೊಮ್ಮಸಂದ್ರ	116/1	0–11	ವ್ಯವಸಾಯ ವಲಯ	ವಸತಿ
					116/2	0–27		
					116/3	0–16		
					ಒಟ್ಟು	01–14		

ಷರಾ: ಅರ್ಜಿದಾರರು ಪ್ರಶ್ನಿತ ಜಮೀನುಗಳನ್ನು ವ್ಯವಸಾಯ ವಲಯದಿಂದ ವಸತಿ ಉಪಯೋಗಕ್ಕಾಗಿ ಭೂಉಪಯೋಗ ಬದಲಾವಣೆ ಮಾಡಿ ವಿನ್ಯಾಸ ಅಭಿವೃದ್ಧಿಪಡಿಸುವುದರಿಂದ ಸಾರ್ವಜನಿಕರಿಗೆ ಯೋಗ್ಯ ಬೆಲೆಯಲ್ಲಿ ನಿವೇಶನಗಳು ಲಭ್ಯವಾಗುತ್ತವೆ. ವಿನ್ಯಾಸ ಅಭಿವೃದ್ಧಿ ಕಾಮಗಾರಿಗಳು ನಡೆಯುವಾಗ ಸ್ಥಳೀಯ ಕೂಲಿ ಕಾರ್ಮಿಕರಿಗೆ ಉದ್ಯೋಗ ದೊರಕುತ್ತದೆ. ವಿನ್ಯಾಸದ ಅಭಿವೃದ್ಧಿಯಿಂದ ಸುತ್ತಮುತ್ತಲಿನ ಪ್ರದೇಶದ ಅಭಿವೃದ್ಧಿಗೆ ಸಹಕಾರಿಯಾಗಲಿದೆ ಹಾಗೂ ಯೋಜನಾ ಬದ್ಧವಾದ ವಿನ್ಯಾಸ ರಚನೆಯಿಂದ ಉತ್ತಮ ರಸ್ತೆಗಳು, ನಾಗರಿಕ ಸೌಲಭ್ಯದ ಜಾಗಗಳು ಮತ್ತು ಉದ್ಯಾನವನಗಳು ಸಾರ್ವಜನಿಕರ ಉಪಯೋಗಕ್ಕಾಗಿ ಲಭ್ಯವಾಗುತ್ತವೆ ಎಂಬ ಸಾರ್ವಜನಿಕ ಹಿತಾಸಕ್ತಿ ಅಂಶ ಅಡಗಿದೆ ಎಂದು ತಿಳಿಸುತ್ತಾ, ಪ್ರಶ್ನಿತ ಜಮೀನುಗಳನ್ನು 'ವ್ಯವಸಾಯ ವಲಯ' ದಿಂದ 'ವಸತಿ ಉಪಯೋಗ' ಕ್ಕೆ ಭೂಉಪಯೋಗ ಬದಲಾವಣೆ ಮಾಡಿಕೊಳ್ಳಲು ಇಚ್ಛಿಸಿರುವುದಾಗಿ ಕೋರಿರುತ್ತಾರೆ.

BDA/PRO/CLU-70/2023-24 ಸಹಿ/- ನಗರ ಯೋಜಕ ಸದಸ್ಯರು, ಬೆಂಅಪ್ರಾ, ಬೆಂಗಳೂರು

ಉಪನಗರ ವರ್ತುಲ ರಸ್ತೆ (STRR) ಯೋಜನಾ ಪ್ರಾಧಿಕಾರ
ಎಸ್.ಆರ್.ಡಿ.ಸಿ. ಕಟ್ಟಡ, ನಂ.1, ಅಲಿ ಅಸ್ಕರ್ ರಸ್ತೆ, ಬೆಂಗಳೂರು–560052. ದೂರವಾಣಿ: 080–22263479

ಸಂಖ್ಯೆ: STRRPA/TP/CLU/175/2022-23 ದಿನಾಂಕ: 05–12–2023

ಪ್ರಕಟಣೆ

ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ರ ಕಲಂ 14(ಎ) ರ ಅಡಿಯಲ್ಲಿ ಈ ಕೆಳಕಂಡ ಅರ್ಜಿದಾರರು **'ವಸತಿ'** ವಲಯದಿಂದ **'ಕೈಗಾರಿಕೆ'** ವಲಯಕ್ಕೆ ಭೂಉಪಯೋಗ ಬದಲಾವಣೆ ಕೋರಿ ಅರ್ಜಿ ಸಲ್ಲಿಸಿರುತ್ತಾರೆ. ಭೂಉಪಯೋಗ ಬದಲಾವಣೆ ಪ್ರಸ್ತಾವನೆಯ ವಿವರಗಳು ಈ ಕೆಳಕಂಡಂತೆ ಇರುತ್ತದೆ. ಸದರಿ ಭೂಉಪಯೋಗ ಬದಲಾವಣೆ ಪ್ರಸ್ತಾವನೆಯ ಬಗ್ಗೆ ಯಾವುದೇ ಆಕ್ಷೇಪಣೆಗಳಿದ್ದಲ್ಲಿ, ಈ ಪ್ರಕಟಣೆ ಪ್ರಕಟವಾದ ದಿನಾಂಕದಿಂದ 15 ದಿವಸಗಳೊಳಗಾಗಿ ಆಕ್ಷೇಪಣೆಗಳನ್ನು ಲಿಖಿತವಾಗಿ **ಸದಸ್ಯ ಕಾರ್ಯದರ್ಶಿಗಳು, ಉಪನಗರ ವರ್ತುಲ ರಸ್ತೆ (STRR) ಯೋಜನಾ ಪ್ರಾಧಿಕಾರ, ಬೆಂಗಳೂರು** ಕಛೇರಿಗೆ ಸಲ್ಲಿಸಲು ತಿಳಿಸಲಾಗಿದೆ. ನಿಗದಿತ ಅವಧಿಯ ನಂತರ ಬರುವ ಯಾವುದೇ ಆಕ್ಷೇಪಣೆಗಳನ್ನು ಪರಿಗಣಿಸುವುದಿಲ್ಲ.

ಕ್ರ. ಸಂ	ಅರ್ಜಿದಾರರ ಹೆಸರು ಮತ್ತು ವಿಳಾಸ	ತಾಲ್ಲೂಕು	ಹೋಬಳಿ	ಗ್ರಾಮ	ಸ.ನಂ.	ವಿಸ್ತೀರ್ಣ (ಎ–ಗುಂ)	ಅನುಮೋದಿತ ಮಹಾಯೋಜನೆಯಂತೆ ಭೂಉಪಯೋಗ	ಬದಲಾವಣೆ ಕೋರಿದ ಭೂಉಪಯೋಗ
1	ಶ್ರೀ ಅಬ್ದುಲ್ ವಹಾಬ್ ಬಿನ್ ಎಚ್. ಅಬ್ದುಲ್ ರಷೀದ್ ಮತ್ತು ಶ್ರೀಮತಿ. ತಸ್ಲೀಮ್ ಇಸ್ಮಾಯಿಲ್ ನಗ್ರಿ ನಂ.38/39, ಎಸ್.ಟಿ.ಬಿ.ಎಸ್ ಲೇಔಟ್, ಎಸ್.ಟಿ ಬೆಡ್, ಕೋರಮಂಗಲ, 4ನೇ ಬ್ಲಾಕ್, ಅಗರ, ಬೆಂಗಳೂರು – 560034.	ಆನೇಕಲ್	ಕಸಬಾ	ತಿಮ್ಮಸಂದ್ರ	46	5–00	ವಸತಿ	ಕೈಗಾರಿಕೆ

ಷರಾ:– ಪ್ರಸ್ತಾವನೆಯಲ್ಲಿನ ಅರ್ಜಿದಾರರು ಪ್ರಶ್ನಿತ ಜಮೀನಿನ ಪರಿಸರದಲ್ಲಿ ಕೈಗಾರಿಕೆ ಬೆಳವಣಿಗೆಗಳು ಬರುತ್ತಿದ್ದು, ಹಾಗೂ ಸಾರ್ವಜನಿಕ ಉದ್ಯೋಗಾವಕಾಶ ಸೃಷ್ಟಿಯಾಗುತ್ತಿರುವುದರಿಂದ ಸಾರ್ವಜನಿಕ ಹಿತಾಸಕ್ತಿ ಅಡಗಿದೆ ಎಂದು ತಿಳಿಸುತ್ತಾ ಸದರಿ ಪ್ರದೇಶವನ್ನು **'ವಸತಿ ವಲಯ'** ದಿಂದ **'ಕೈಗಾರಿಕೆ ವಲಯ'** ಕ್ಕೆ ಭೂಉಪಯೋಗ ಬದಲಾವಣೆ ಮಾಡಿಕೊಳ್ಳಲು ಇಚ್ಛಿಸಿರುವುದಾಗಿ ಸಾರ್ವಜನಿಕ ಹಿತಾಸಕ್ತಿ ಅಂಶವಾಗಿ ತಿಳಿಸಿರುತ್ತಾರೆ.

ಸಹಿ/–
ಸದಸ್ಯ ಕಾರ್ಯದರ್ಶಿಗಳು ಹಾಗೂ
ನಗರ ಮತ್ತು ಗ್ರಾಮಾಂತರ ಯೋಜನಾ ಜಂಟಿ ನಿರ್ದೇಶಕರು,
ಉಪನಗರ ವರ್ತುಲ ರಸ್ತೆ (STRR) ಯೋಜನಾ ಪ್ರಾಧಿಕಾರ, ಬೆಂಗಳೂರು.

[illegible]/2451/[illegible]/2023–24

ಭಾರತ ಸರ್ಕಾರ
ಸಂವಹನಗಳ ಸಚಿವಾಲಯ
ದೂರಸಂಚಾರ ಇಲಾಖೆ

ಭಾರತೀಯ ದೂರಸಂಚಾರ ನಿಯಂತ್ರಣ ಪ್ರಾಧಿಕಾರ, ನವದೆಹಲಿ ಇಲ್ಲಿನ ಅಧ್ಯಕ್ಷ ಹುದ್ದೆಗಾಗಿ ಅರ್ಜಿ ಆಹ್ವಾನ

ಭಾರತ ಸರ್ಕಾರದ ಸಂವಹನಗಳ ಸಚಿವಾಲಯ, ದೂರಸಂಚಾರ ಇಲಾಖೆ ಇವರು, ಭಾರತೀಯ ದೂರಸಂಚಾರ ನಿಯಂತ್ರಣ ಪ್ರಾಧಿಕಾರದಲ್ಲಿನ (ಟ್ರಾಯ್) ಅಧ್ಯಕ್ಷ ಹುದ್ದೆಯ ಭರ್ತಿಗಾಗಿ, ಭಾರತೀಯ ನಾಗರಿಕರಿಂದ ಅರ್ಜಿಗಳನ್ನು ಆಹ್ವಾನಿಸಿದ್ದಾರೆ.

ಟ್ರಾಯ್ ಎಂಬುದೊಂದು ಶಾಸನಬದ್ಧ ಸ್ವಾಯತ್ತ ಅಂಗವಾಗಿದ್ದು, ಭಾರತೀಯ ದೂರಸಂಚಾರ ನಿಯಂತ್ರಣ ಪ್ರಾಧಿಕಾರ ಕಾಯ್ದೆ, 1997ರ ಅಡಿಯಲ್ಲಿ ಸ್ಥಾಪನೆಗೊಂಡಿದೆ. ಇದು ದೂರಸಂಚಾರ ಸೇವೆಗಳನ್ನು ನಿಯಂತ್ರಿಸುವ, ವಿವಾದಗಳನ್ನು ಬಗೆಹರಿಸುವ, ಮನವಿಗಳನ್ನು ಇತ್ಯರ್ಥಪಡಿಸುವ, ದೂರಸಂಚಾರ ಕ್ಷೇತ್ರದಲ್ಲಿನ ಸೇವಾ ಪೂರೈಕೆದಾರರ ಹಾಗೂ ಗ್ರಾಹಕರ ಹಿತರಕ್ಷಿಸುವ ಮತ್ತು ದೂರಸಂಚಾರ ಕ್ಷೇತ್ರವನ್ನು ಉತ್ತೇಜಿಸುವ ಹಾಗೂ ಅದರ ವ್ಯವಸ್ಥಿತ ಬೆಳವಣಿಗೆಯನ್ನು ಖಚಿತಪಡಿಸುವ ಜವಾಬ್ದಾರಿ ಹೊಂದಿರುತ್ತದೆ.

ನೇಮಕಾತಿಗೆ ಸಂಬಂಧಿತ ವಿವರವಾದ ಅರ್ಹತಾ ಷರತ್ತುಗಳನ್ನು ಹಾಗೂ ಇನ್ನಿತರ ಷರತ್ತು ಮತ್ತು ನಿಬಂಧನೆಗಳನ್ನು www.dot.gov.in ಅಥವಾ http://www.trai.gov.in ಅಥವಾ http://www.dopt.gov.in ವೆಬ್‌ಸೈಟ್‌ಗಳಲ್ಲಿ ಪರಿಶೀಲಿಸಬಹುದು. **ಈ ಹಿಂದೆ 22.06.2023 ರಂದು ಪ್ರಕಟಿತ ಜಾಹೀರಾತಿಗೆ ಸ್ಪಂದಿಸಿ ಅರ್ಜಿ ಸಲ್ಲಿಸಿದ್ದವರು, ಪುನಃ ಅರ್ಜಿ ಸಲ್ಲಿಸುವ ಅಗತ್ಯವಿರುವುದಿಲ್ಲ. ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ 22.12.2023 ರಂದು ಸಂಜೆ 5.30 ಗಂಟೆಯೊಳಗೆ.**

cbc06201/11/0011/2324

TeamLease® Putting India to Work

ಟೀಂಲೀಸ್ ಸರ್ವೀಸಸ್ ಲಿಮಿಟೆಡ್
CIN: L74140KA2000PLC118395
[illegible], ಕೋರಮಂಗಲ, ಬೆಂಗಳೂರು – 560095, ಕರ್ನಾಟಕ, ಭಾರತ. ದೂರವಾಣಿ: +91 80 6824 3333
ಫ್ಯಾಕ್ಸ್: +91 80 6824 3001
corporateaffairs@teamlease.com | https://group.teamlease.com/

ಅಂಚೆ ಮತದಾನ ಸೂಚನೆ, ರಿಮೋಟ್ ಇ–ವೋಟಿಂಗ್ ಮತ್ತು ಅಂತಿಮ ದಿನಾಂಕ

1) [illegible]

ಕ್ರ. ಸಂ.	[illegible]
1.	[illegible] (DIN: 02545977) [illegible] ನವೆಂಬರ್ 08, 2023 [illegible] ನವೆಂಬರ್ 07, 2028 [illegible]

2. [illegible]
3. [illegible]
i) [illegible]
ii) [illegible]

ಇ–ವೋಟಿಂಗ್ ಪ್ರಾರಂಭ	ಇ–ವೋಟಿಂಗ್ ಮುಕ್ತಾಯ
ಡಿಸೆಂಬರ್ 08, 2023 ಭಾ.ಕಾ. ಬೆಳಗ್ಗೆ 09.00	ಜನವರಿ 06, 2024 ಭಾ.ಕಾ. ಸಂಜೆ 05.00

iii) [illegible]
iv) [illegible]
4. [illegible]
5. [illegible]
6. [illegible]
7. [illegible]

ದಿನಾಂಕ: ಡಿಸೆಂಬರ್ 07, 2023
ಸ್ಥಳ: ಬೆಂಗಳೂರು

ಟೀಂಲೀಸ್ ಸರ್ವೀಸಸ್ ಲಿಮಿಟೆಡ್ ಪರವಾಗಿ
ಸಹಿ/–
[illegible]
(M. No. F10911)

ಬೆಂಗಳೂರು ವಿಶ್ವವಿದ್ಯಾಲಯ
ಕುಲಸಚಿವರ ಕಛೇರಿ, ಜ್ಞಾನಭಾರತಿ, ಬೆಂಗಳೂರು – 560056

ಸಂಖ್ಯೆ: ಬೆವಿವಿ/ಇ–ಆಡಳಿತ/ಟೆಂಡರ್–ಜಾಪಿರಾಷ–08/2023–24 ದಿನಾಂಕ: 05.12.2023

ಇ–ಟೆಂಡರ್‌ಗಳಿಗಾಗಿ ಆಹ್ವಾನ ಪ್ರಕಟಣೆ

ಬೆಂಗಳೂರು ವಿಶ್ವವಿದ್ಯಾಲಯವು ಈ ಕೆಳಕಂಡ ಟೆಂಡರ್‌ಗಳಿಗಾಗಿ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ ಮುಖಾಂತರ ಬಿಡ್‌ಗಳನ್ನು ಆಹ್ವಾನಿಸಲಾಗಿದೆ. ಟೆಂಡರ್‌ಗೆ ಸಂಬಂಧಿಸಿದ ವಿವರಗಳು **www.kppp.karnataka.gov.in** ನಲ್ಲಿ ದೊರಕುತ್ತವೆ. ಬಿಡ್‌ಗಳನ್ನು **www.kppp.karnataka.gov.in** ನಲ್ಲಿ ಆನ್‌ಲೈನ್ ಮೂಲಕ ಸಲ್ಲಿಸಬೇಕು. ಟೆಂಡರ್‌ನಲ್ಲಿ ಸೂಚಿಸಲಾದ ಸಮಯ ವೇಳಾಪಟ್ಟಿಗೆ ಬದ್ಧರಾಗಿರಲು ಬಿಡ್‌ದಾರರಲ್ಲಿ ವಿನಂತಿಸಲಾಗಿದೆ.

ಕ್ರ. ಸಂ.	ಟೆಂಡರ್‌ಗಳ ವಿವರ
1	ಬೆಂಗಳೂರು ವಿಶ್ವವಿದ್ಯಾಲಯದ ಪಿಜಿ ಸೆಂಟರ್ ರಾಮನಗರದ ಮಹಿಳಾ ವಿದ್ಯಾರ್ಥಿ ನಿಲಯದ ಶೌಚಾಲಯ ಮತ್ತು ಸ್ನಾನಗೃಹಗಳ ದುರಸ್ತಿ ಕಾರ್ಯಗಳು.
2	ಬೆಂಗಳೂರು ವಿಶ್ವವಿದ್ಯಾಲಯದ ಜ್ಞಾನಭಾರತಿ ಆವರಣದಲ್ಲಿ ಬೀದಿ ದೀಪಗಳ ವಾರ್ಷಿಕ ನಿರ್ವಹಣೆಯನ್ನು ಒದಗಿಸುವುದು (2023–24).
3	ಸೂಕ್ಷ್ಮ ಜೀವವಿಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ವಿಭಾಗಕ್ಕೆ ಕಾರ್ಬನ್ ಡೈಆಕ್ಸೈಡ್ ಇನ್‌ಕ್ಯುಬೇಟರ್ ಉಪಕರಣ ಪೂರೈಕೆ ಮತ್ತು ಅಳವಡಿಕೆ.
4	ಸೂಕ್ಷ್ಮ ಜೀವವಿಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ವಿಭಾಗಕ್ಕೆ HPLC ಉಪಕರಣ ಪೂರೈಕೆ ಮತ್ತು ಅಳವಡಿಕೆ.
5	ಸೂಕ್ಷ್ಮ ಜೀವವಿಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ವಿಭಾಗಕ್ಕೆ 80 ಡೀಪ್ ಫ್ರೀಜರ್ ಉಪಕರಣ ಪೂರೈಕೆ ಮತ್ತು ಅಳವಡಿಕೆ.
6	ರಸಾಯನಶಾಸ್ತ್ರ ವಿಭಾಗಕ್ಕೆ ಫ್ಲ್ಯಾಶ್ ಕ್ರೋಮ್ಯಾಟೋಗ್ರಫಿ ಉಪಕರಣ ಪೂರೈಕೆ ಮತ್ತು ಅಳವಡಿಕೆ.
7	ಬೆಂಗಳೂರು ವಿಶ್ವವಿದ್ಯಾಲಯದ ವಿವಿಧ ವಿಭಾಗಗಳಿಗೆ ಪೀಠೋಪಕರಣಗಳ ಪೂರೈಕೆ (ಪೂರ್ವ ಬಿಡ್ ಸಭೆಯನ್ನು ದಿನಾಂಕ **11.12.2023ರ ಬೆಳಗ್ಗೆ 11.30 ಗಂಟೆಗೆ** ಬೋರ್ಡ್ ರೂಂ, ಕುಲಸಚಿವರ ಕಛೇರಿ, ನ್ಯೂ ಗೆಸ್ಟ್‌ಹೌಸ್, ಜ್ಞಾನಭಾರತಿ ಆವರಣ ಇಲ್ಲಿ ನಡೆಸಲಾಗುವುದು).

DIPR/CP/BCPL/2457/2023-24 ಸಹಿ/– ಕುಲಸಚಿವರು

ದಿ ನ್ಯಾಷನಲ್ ಕೋ–ಆಪರೇಟಿವ್ ಬ್ಯಾಂಕ್ ಲಿ.,
ಆಡಳಿತ ಕಛೇರಿ: 73/1, ಗಾಂಧಿ ಬಜಾರ್ ಮುಖ್ಯರಸ್ತೆ, ಬೆಂಗಳೂರು–560004
ದೂರವಾಣಿ: 080–22423998, 26618093, ಇ–ಮೇಲ್: admin.ao@ncbl.org.in

ಪತ್ರಿಕಾ ಪ್ರಕಟಣೆ

ವಿಶೇಷ ಸಾಮಾನ್ಯ ಸಭೆಯ ಸೂಚನಾ ಪತ್ರ

ಮಾನ್ಯ ಸದಸ್ಯರೇ,

29ನೇ ಡಿಸೆಂಬರ್ 2023, ಶುಕ್ರವಾರ ಬೆಳಗ್ಗೆ 10.00 ಘಂಟೆಯಿಂದ 2.00 ಘಂಟೆವರೆಗೆ ಬ್ಯಾಂಕಿನ ವಿಶೇಷ ಸಾಮಾನ್ಯ ಸಭೆಯನ್ನು ಬ್ಯಾಂಕಿನ ಅಧ್ಯಕ್ಷರಾದ ಶ್ರೀ. ಜೆ.ಸಿ. ಕೃಷ್ಣರವರ ಅಧ್ಯಕ್ಷತೆಯಲ್ಲಿ ಈ ಕೆಳಕಂಡ ವಿಷಯವನ್ನು ಚರ್ಚಿಸಿ ತೀರ್ಮಾನಿಸಲು ಕರೆಯಲಾಗಿದೆ. ತಾವುಗಳು ಸಕಾಲಕ್ಕೆ ಆಗಮಿಸಿ ಸಭೆಯ ಕಾರ್ಯ ಕಲಾಪಗಳಲ್ಲಿ ಭಾಗವಹಿಸಿ ಯಶಸ್ವಿಗೊಳಿಸಬೇಕಾಗಿ ವಿನಂತಿ.

ಸ್ಥಳ: ಪೂರ್ಣಿಮಾ ಕನ್ವೆನ್ಷನ್ ಸೆಂಟರ್
#27/1, 31ನೇ ಅಡ್ಡರಸ್ತೆ, 16ನೇ ಮುಖ್ಯರಸ್ತೆ, 4ನೇ ಬ್ಲಾಕ್, ಜಯನಗರ, ಬೆಂಗಳೂರು–560011

ವಿಷಯ: ಬ್ಯಾಂಕಿನ ವಿಲೀನೀಕರಣದ ಬಗ್ಗೆ

ಕರ್ನಾಟಕ ರಾಜ್ಯದ ಬೆಂಗಳೂರಿನಲ್ಲಿ ನೋಂದಾಯಿತವಾಗಿರುವ ದಿ ನ್ಯಾಷನಲ್ ಕೋ–ಆಪರೇಟಿವ್ ಬ್ಯಾಂಕ್ ಲಿ., ಅನ್ನು ಮಹಾರಾಷ್ಟ್ರ ರಾಜ್ಯದ ಪುಣೆಯಲ್ಲಿ ನೋಂದಾಯಿತವಾಗಿರುವ ದಿ ಕಾಸ್ಮೊಸ್ ಕೋ–ಆಪರೇಟಿವ್ ಬ್ಯಾಂಕ್ ಲಿ. (ಮಲ್ಟಿ ಸ್ಟೇಟ್ ಕೋ–ಆಪರೇಟಿವ್ ಬ್ಯಾಂಕ್) ನೊಂದಿಗೆ ವಿಲೀನಗೊಳಿಸುವ ಯೋಜನೆಯನ್ನು ಸಹಮತ ಸೂಚಿಸಿ ಅನುಮೋದಿಸುವುದು. ಈ ಯೋಜನೆಯ ಅನುಮೋದನೆಗಾಗಿ ಭಾರತೀಯ ರಿಸರ್ವ್ ಬ್ಯಾಂಕ್‌ಗೆ ಸಲ್ಲಿಸುವುದು.

ದಿನಾಂಕ: 07.12.2023
ಸ್ಥಳ : ಬೆಂಗಳೂರು

ಆಡಳಿತ ಮಂಡಳಿಯ ಅಪ್ಪಣೆಯ ಮೇರೆಗೆ
ಸಹಿ/–
(ಸುಮಾ.ಪಿ.ವಿ)
ಪ್ರ. ಮುಖ್ಯ ಕಾರ್ಯನಿರ್ವಹಣಾಧಿಕಾರಿ

ಸೂಚನೆ

1. ಸಭೆಗೆ ಹಾಜರಾಗಲು ನಿಯತ ಸದಸ್ಯರಿಗೆ ಮಾತ್ರ ಪ್ರವೇಶ ಅವಕಾಶವಿರುವುದು, ಸಭೆಗೆ ಭಾವಚಿತ್ರವಿರುವ ಬ್ಯಾಂಕಿನ ಸದಸ್ಯತ್ವದ ಗುರುತಿನ ಚೀಟಿಯನ್ನು ಹಾಜರು ಪಡಿಸುವುದು ಕಡ್ಡಾಯವಾಗಿರುತ್ತದೆ. (ಸದಸ್ಯರಲ್ಲದವರಿಗೆ/ಸಹ ಸದಸ್ಯರಿಗೆ ಸಭೆಗೆ ಪ್ರವೇಶವಿರುವುದಿಲ್ಲ.)
2. ನಿಯತ ಸದಸ್ಯರು ಬ್ಯಾಂಕಿನ ಸದಸ್ಯತ್ವದ ಗುರುತಿನ ಚೀಟಿ ಪಡೆಯದಿದ್ದಲ್ಲಿ ಇತ್ತೀಚಿನ 2 ಭಾವಚಿತ್ರಗಳೊಂದಿಗೆ ಆಡಳಿತ ಕಛೇರಿಯನ್ನು **ದಿನಾಂಕ: 27.12.2023ರ** ಒಳಗೆ ಸಂಪರ್ಕಿಸಿ ಬ್ಯಾಂಕಿನ ವ್ಯವಹಾರದ ವೇಳೆಯಲ್ಲಿ ಗುರುತಿನ ಚೀಟಿ ಪಡೆಯಬಹುದು.

IDEMI ISO 9001:2015 AS 9100:2016

Ministry of Micro, Small & Medium Enterprises
Organised by IDEMI Mumbai Ministry of MSME Govt. of India

Government Certificate course on
CYBER SECURITY &
ETHICAL HACKING

Course duration : 2 days
Time -10AM to 5PM

Date -16,17 Dec.2023

venue -IDEMI EXTENSION CENTRE Bangaluru
c/o MSME DEVELOPMENT INSTITUTE ,WEST OF CHORD RD, INDUSTRIAL ESTATE,
RAJAJINAGAR, BENGALURU, KARNATAKA - 560010

After successful completion, certificate will be issued

Email id:training@idemi.org http://.idemi.org Ph. (022) 2405 0301/2/3/4

Contents : Cyber crime & terrorism, Type of attacks, Goal of Security & computer Forensic, Social Media, Mobile Hacking, Cyber Hacking, Digital Forensic, Data Recovery.

Fees -5000+18% GST in the name of IDEMI
(includes breakfast ,lunch & tea)

For Registration Scan QR Code

Contact-9886123011,9403566219,7588036918,9951980554

Documents required : 2 passport photos, Adhar card xerox, Education proof xerox